## ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆಎಂಎಫ್‌ಸಿ, ಕುಂದಾಪುರ

**ಓ.ಎಸ್. ನಂಬ್ರ: 214-2010**

**ಪಿ.ಡಬ್ಲ್ಯೂ: 1**

ದಿನಾಂಕ: 26-08-2014

ಸಾಕ್ಷಿದಾರರ ಹೆಸರು : ಟಿ. ನಾಗರಾಜ ಭಟ್
ತಂದೆಯ ಹೆಸರು : ದಿ: ಮಧ್ವರಾಯ
ಪ್ರಾಯ : 54
ಉದ್ಯೋಗ : ಬೇಸಾಯ
ಗ್ರಾಮ : ತೆಕ್ಕಟ್ಟೆ

ಪ್ರಮಾಣವಚನ ಮಾಡಿಸಲಾಗಿದೆ

ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ

ನಾನು ಈ ಕೇಸಿನ ವಾದಿ

ನಾನು ನನ್ನ ಪ್ರಮಾಣಪತ್ರವನ್ನು ಈ ದಿವಸ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದನ್ನು ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನನ್ನ ಮುಖ್ಯವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಕೇಳಿಕೊಳ್ಳುತ್ತೇನೆ.

1. ದಾವಾ ಎ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟ ಎರಡು ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ:1 ಮತ್ತು ನಿಪಿ:2 ಎಂದು ಗುರುತಿಸಲಾಯಿತು.

2. ದಾವಾ ಬಿ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟ 3 ಪಹಣಿ ಪತ್ರಗಳನುನ ಹಾಜರುಪಡಿಸಿದ್ದು ಅವುಗಳನ್ನು ನಿಪಿ:3 ರಿಂದ ನಿಪಿ: 5 ಎಂದು ಗುರುತಿಸಲಾಯಿತು.

3. ದಿ: 16-03-2003 ರ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ:6 ಎಂದು ಗುರುತಿಸಲಾಯಿತು. ನಿಪಿ:6 ನ್ನು 1 ಮತ್ತು 2ನೇ ಪ್ರತಿವಾದಿಗಳ ಅಧಿಕಾರ ಪತ್ರ ಹೊಂದಿದವರಾಗಿ ಅವರ ತಂದೆ ಬಾರಾಳಿ ವೆಂಕಟರಮಣ ಹತ್ವಾರ ಹಾಗೂ ಸದ್ರಿ ವೆಂಕಟರಮಣ ಹತ್ವಾರ ರವರ ಪತ್ನಿ ಸಾವಿತ್ರಮ್ಮ ವಯಕ್ತಿಕವಾಗಿ ನಿಪಿ:6 ದಾಖಲೆಯಲ್ಲಿ 1ನೇ ಪಕ್ಷಗಾರರಾಗಿ, ನಾನು 2ನೇ ಪಕ್ಷಗಾರನಾಗಿ ಭಾಗಿಯಾಗಿದ್ದೆವು. ನಿಪಿ:6 ರಲ್ಲಿ ಸಾಕ್ಷಿಯಹು ತಮ್ಮ 4 ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ:6ಎ ಯಿಂದ ನಿಪಿ:6ಡಿ

26/8/14.

T. Nagaraja Bhat

Court of ... Civil

T. ನಾಗರಾಜ ಭಟ್

No 1 Examined

ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ:6 ರಲ್ಲಿ ಸಾವಿತ್ರಮ್ಮ ನವರ 4 ಸಹಿಗಳನ್ನು ನೋಡಿ ಗುರುತಿಸಿದ್ದು ಆಹಿಗಳನ್ನು ನಿಪಿ:6ಇ ಯಿಂದ ನಿಪಿ: 6ಹೆಚ್ ಎಂದು ಗುರುತಿಸಲಾಯಿತು. ನಿಪಿ:6 ರಲ್ಲಿ ಎಲ್ಲಾ ಪ್ರತಿವಾದಿಯರ ತಂದೆ ರಾ॰ ಮೇಲೆ ಹೇಳಿದ ವೆಂಕಟರಮಣ ಹತ್ವಾರ ಇವರು ಟಿ.ಆರ್ ವೆಂಕಟರಮಣ ಹತ್ವಾರ್ ಎಂದು ಸಹಿ ಮಾಡಿದ್ದಾರೆ. ಸದರಿ ವೆಂಕಟರಮಣ ಹತ್ವಾರ ರವರ ನಾಲ್ಕು ಸಹಿಗಳನ್ನು ನಿಪಿ:6 ರಲ್ಲಿ ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ:6ಐ ಯಿಂದ ನಿಪಿ:6ಎಲ್ ಎಂದು ಗುರುತಿಸಲಾಯಿತು. ನಿಪಿ:6 ದಾಖಲೆಗೆ ಸಾಕ್ಷಿಗಳಾಗಿ ಟಿ.ನರಸಿಂಹ ದೇವಾಡಿಗ ಮತ್ತು ಕೆ ಹಂರ್ಝು ಎನ್ನುವವರು ಸಹಿ ಮಾಡಿದ್ದಾರೆ, ಅವರ ಸಮಕ್ಷಮ ನಿಪಿ:6 ದಾಖಲೆಯೊಗಿರುತ್ತದೆ. ನಾನು ಸದರಿ ಸಾಕ್ಷಿಗಳ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ:6ರಲ್ಲಿ ನರಸಿಂಹ ದೇವಾಡಿಗರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ:6 ಎಂದು ಹಾಗೂ ಹಂರ್ಝು ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ:6ಎನ್ ಎಂದು ಗುರುತಿಸಲಾಯಿತು. ನಿಪಿ:6 ಮೇಲೆ ಹೇಳಿದ ವೆಂಕಟರಮಣ ಹತ್ವಾರ್ ಅವರ ಪತ್ನಿ ಸಾವಿತ್ರಮ್ಮ ನವರ ಮಾಹಿತಿಯ ಮೇರೆಗೆ ತಯಾರಾಗಿದೆ. ಸದರಿ ದಾಖಲೆ ದಸ್ತಾವೇಜು ಬರಹಗಾರಾದ ಕೆ.ಜಿ ವೆಂಕಟರಮಣಯ್ಯ ರವರ ಮುಖೇನ ತಯಾರಾಗಿದ್ದು ಅವರು ಅದಕ್ಕೆ ಸಹಿ ಮಾಡಿರುತ್ತಾರೆ. ನಾನು ಸದರಿ ಯವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಸಹಿಯನ್ನು ನಿಪಿ:6ಓ ಎಂದು ಗುರುತಿಸಲಾಯಿತು. ನಿಪಿ:6 ದಾಖಲೆಗೆ ನಾನು ಮತ್ತು ಮೇಲೆ ಹೇಳಿದ ವೆಂಕಟರಮಣ ಹತ್ವಾರ್ ಹಾಗೂ ಅವರ ಪತ್ನಿ ಸಾವಿತ್ರಮ್ಮ ದಾಖಲೆಯಲ್ಲಿ ಬರೆದ ವಿಚಾರವನ್ನು ಅರ್ಥೈಸಿಕೊಂಡು ಸಹಿ ಮಾಡಿದ್ದೇವೆ. ಸದರಿ ದಾಖಲೆ ತಯಾರಿಸಲು ಆಗತ್ಯ ಮಾಹಿತಿಯ ಜೊತೆ ಆಗತ್ಯ ದಾಖಲೆಗಳನ್ನು ಸಹ ವೆಂಕಟರಮಣ ಹತ್ವಾರ್ ಹಾಗೂ ಅವರ ಪತ್ನಿ ಸಾವಿತ್ರಮ್ಮ ಒದಗಿಸಿರುತ್ತಾರೆ.

ನಿಪಿ:6 ಕರಾರು ಅದ ಸಮಯದಲ್ಲಿ ಮೇಲೆ ಹೇಳಿದ ವೆಂಕಟರಮಣ ಹತ್ವಾರ ಹಾಗೂ ಅವರ ಪತ್ನಿ ಸಾವಿತ್ರಮ್ಮ, ಸಾವಿತ್ರಮ್ಮನವರ ತಂದೆ ಶ್ರೀನಿವಾಸಯ್ಯರವರು ಬರೆದಿಟ್ಟ ದಿ:19-07-1954 ರ ವೀಲು ನಾಮೆಯ ಜೆರಾಕ್ಸ್ ನಕಲನ್ನು ನನಗೆ ನೀಡಿದ್ದರು ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

4. 1 ಮತ್ತು 2ನೇ ಪ್ರತಿವಾದಿಗಳಿಗೆ ವಾದಿಯು ಕಳುಹಿಸಿದ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ:7 ಎಂದು ಗುರುತಿಸಲಾಯಿತು.

5. ಸದರಿ ನೋಟೀಸು 1 ಮತ್ತು 2ನೇ ಪ್ರತಿವಾದಿಗಳಿಗೆ ಜಾರಿಯಾದ ಬಗ್ಗೆ ಎರಡು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ:8 ಮತ್ತು ನಿಪಿ:9 ಎಂದು ಗುರುತಿಸಲಾಯಿತು.

6. 1ನೇ ಪ್ರತಿವಾದಿಯ ವಕೀಲರು ವಾದಿಗೆ ಕಳುಹಿಸಿದ ಪ್ರತ್ಯುತ್ತರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ:10 ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯ ವಿಚಾರಣೆಗೆ ಸಮಾಯಾವಕಾಶ ಕೋರಿದ್ದರಿಂದ ಮುಂದೂಡಲಾಗಿದೆ)

ಓ. ಹೇ. ಕೇ. ಸರಿ ಇದೆ.

ನನ್ನ. ಹೇ . ಮೇ. ಬ. ಮಾಡಲಾಗಿದೆ.

T. Nagaraja Bhat

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕುಂದಾಪುರ

Court of ... Civil